MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 26-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 4ನೇ ದಿನ ಹೆಚ್ಚಳವಾಗಿ ಮತ್ತೆ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಸತತ 4ನೇ ದಿನವೂ ಹೆಚ್ಚಳವಾಗಿದ್ದು, ಟನ್‌ಗೆ 4173 ರಿಂಗಿಟ್ಸ್ $ 920.12 ಆಗಿದೆ. ಹಾಗೂ ಒಟ್ಟು 6.74 ಶೇಕಡಾ ಹೆಚ್ಚಳವಾಗಿದೆ. ಇತರ ಪರ್ಯಾಯ ಖಾದ್ಯತೈಲಗಳ ದರ ಹೆಚ್ಚಳದಿಂದ ಪಾಮೆಣ್ಣೆ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಇಂದು ದರ ಮತ್ತೆ ಇಳಿಕೆಯಾಗಿ ಟನ್‌ಗೆ 4046 ರಿಂಗಿಟ್ಸ್ ಆಗಿದೆ.

## ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು ಹೆಚ್ಚಳ

2022 ಎಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು 38 ಶೇಕಡಾ ಹೆಚ್ಚಳದೊಂದಿಗೆ 1.97 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ಸಾಲ್ವೆಂಟ್ಸ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ದತ್ತಾಂಶಗಳ ಪ್ರಕಾರ ಹಿಂದಿನ ವರ್ಷದ ಇದೇ ಅವಧಿಯಲ್ಲಿ 1.43 ಮಿಲಿಯನ್ ಟನ್ ರಫ್ತಾಗಿತ್ತು. ಸಾಸಿವೆ ಹಿಂಡಿ ರಫ್ತು ಹಿಂದಿನ ವರ್ಷದ 658,230 ಟನ್‌ಗಳಿಂದ 1.34 ಮಿಲಿಯನ್ ಟನ್‌ಗಳಾಗಿ ದುಪ್ಪಟ್ಟು ರಫ್ತಾಗಿದೆ. ದಾಖಲೆ ಉತ್ಪಾದನೆ ಹಾಗೂ ಅರೆಯುವಿಕೆಯಿಂದಾಗಿ ಹೆಚ್ಚಿನ ರಫ್ತು ಮಾಡಲು ಸಾಧ್ಯವಾಯಿತೆನ್ನಲಾಗಿದೆ. ಈ ವರ್ಷವೂ ತೈಲಬೀಜಗಳ ಉತ್ಪಾದನೆ ಹೆಚ್ಚಳವಿದ್ದು, ಸಾಸಿವೆ ಹಿಂಡಿ ಹಾಗೂ ಸೋಯಾಮೀಲ್ ರಫ್ತು ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಭಾರತದ ಸೋಯಾಬೀನ್ ಆಮದು 64 ಶೇಕಡಾ ಇಳಿಕೆ ಸಾಧ್ಯತೆ

ಈ ವರ್ಷ ಅಧಿಕ ದೇಶೀ ಉತ್ಪಾದನೆಯಿಂದ ಸೋಯಾಬೀನ್ ಆಮದು ಹಿಂದಿನ ವರ್ಷಕ್ಕಿಂತ 64 ಶೇಕಡಾ ಇಳಿಕೆಯಾಗಿ 2 ಲಕ್ಷ ಟನ್‌ಗಳಾಗಬಹುದೆನ್ನಲಾಗಿದೆ. ಸೋಯಾಮೀಲ್ ದೇಶೀ ಲಭ್ಯತೆ ಹೆಚ್ಚಳವಿರುವುದರಿಂದ ಆಮದು ಮಾಡಬೇಕಾಗಿಲ್ಲವೆನ್ನಲಾಗಿದೆ. ಅಧಿಕ ಸೋಯಾಮೀಲ್ ಉತ್ಪಾದನೆಯಿಂದ ಅದರ ರಫ್ತು ಗಣನೀಯ ಹೆಚ್ಚಳವಾಗಲಿದೆಯೆನ್ನಲಾಗಿದೆ. ಸೋಯಾ ಎಣ್ಣೆಯೂ ದೇಶೀ ಲಭ್ಯತೆ ಹೆಚ್ಚಳದಿಂದ ಆಮದು ಇಳಿಕೆಯಾಗುವ ಸಾಧ್ಯತೆಯಿದೆ. ಈ ವರ್ಷ ದೇಶೀ ತೈಲಬೀಜ ಉತ್ಪಾದನೆ ಹೆಚ್ಚಳದಿಂದ ದೇಶೀ ಖಾದ್ಯತೈಲ ಲಭ್ಯತೆ ಹೆಚ್ಚಳವಾಗಲಿದೆಯೆನ್ನಲಾಗಿದ್ದು, ಮುಂದಿನ ದಿನಗಳಲ್ಲಿ ಖಾದ್ಯತೈಲಗಳ ದರ ಇನ್ನೂ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಖಾದ್ಯತೈಲಗಳ ದರಗಳೂ ಇಳಿಕೆ ಸಾಧ್ಯತೆ

ಈ ವರ್ಷ ದೇಶೀ ಹಾಗೂ ಜಾಗತಿಕ ತೈಲಬೀಜಗಳ ಉತ್ಪಾದನೆ ಹೆಚ್ಚಳದಿಂದಾಗಿ ದೇಶೀ ಹಾಗೂ ಜಾಗತಿಕ ತೈಲ ಪೂರೈಕೆ ಹೆಚ್ಚಳವಾಗಬಹುದು. ಕೇಂದ್ರ ದರಗಳು ಮುಂದಿನ ದಿನಗಳಲ್ಲಿ ಇಳಿಕೆಯಾಗಲಿದೆಯೆಂದು ಹೇಳಿದೆ. ಅಧಿಕ ತೈಲ ಬೀಜ ಉತ್ಪಾದನೆಯಿಂದ ದೇಶೀ ಖಾದ್ಯ ತೈಲ ಉತ್ಪಾದನೆ ಹೆಚ್ಚಳವಾಗಲಿದೆ. ಹಾಗೂ ಜಾಗತಿಕ ಖಾದ್ಯ ತೈಲ ಉತ್ಪಾದನೆಯೂ ಹೆಚ್ಚಳವಾಗಲಿದೆ. ಈ ವರ್ಷ ಖಾದ್ಯ ತೈಲ ದರ ಇಳಿಕೆಯಾಗುವ ಸಾಧ್ಯತೆಗಳಿವೆ. ಇಂಡೋನೇಶಿಯಾ ಪಾಮೆಣ್ಣೆ ರಫ್ತು ಲೆವಿ ವಿನಾಯತಿಯನ್ನು ಹಿಂತೆಗೆದುಕೊಂಡಲ್ಲಿ ಅಂತ್ಯದ ತನಕ ಪಾಮೆಣ್ಣೆ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಮುಂದೆ ಉತ್ಪಾದನೆ ಹೆಚ್ಚಳವಾದಾಗ ದರ ಕಡಿಮೆಯಾಗುವ ಸಾಧ್ಯತೆಯಿದೆ.